

# ಭವದ ಸ್ಪ್ರಿಂಗಿನ ಮೇಲೆ

ಮಹಾಕತ್ತಲ ಕೋಣೆಯಲಿ
ಬಿದಿರ ಅಂಡೆಯ ಒಳಗೆ
ಮಣ್ಣುಮೆತ್ತಿ ಬಚ್ಚಿಟ್ಟ ಬೀಜ
ಉದ್ಭವಿಸಿ ಮಳೆಗಾಲದ ಹಸಿ ನೆಲದಿ
ಪುತಪುತನೆ ಚಿಗಿತೇಳುವ ಸೃಷ್ಟಿ
ವಿಸ್ಮಯಕೆ ಶರಣು

ಬಿರುಬಿಸಿಲಿಗೆ ಬಿಗಿದ ಭೂಮಿ
ಮಳೆಮಾಯೆಗೆ ಹದಗೊಂಡು ಹಿಗ್ಗಿ
ಹುಚ್ಚೆದ್ದು ಹಸಿರುಕ್ಕಿ
ಅವಳ ತೊಡೆಯ ಹಸಿ
ಹಾಲುದುಂಬಿದ ಮೊಲೆಗಳ ಬಿರುಸು
ಎಲ್ಲೆಂದರಲ್ಲಿ ಜೀವ ಥಿಲ್ಲೆಂದು ಒಸರಿ
ಜಗವೆಲ್ಲ ಹಸಿಯಾಗುವ ಹವಣು

ಕತ್ತಲುಂಟು
ಪರಮಾಣುವಿನ ಹೊಟ್ಟೆಯೊಳಗೂ
ಕಂಪಿಸುವ ಉನ್ಮಾದದಲೆಗಳನು
ಕಾಣಲಾರೆವು ಬರಿಗಣ್ಣಲಿ ನಾವು
ಕೇಳಲಾರೆವು
ಛಂದಸ್ಸಿಗೆ ನಿಲುಕದ
ಸ್ವರಸಂಚಾರಗಳನು

ಎಚ್ಚರದಿ ನಿದ್ದೆಗೆಟ್ಟು ಕೂತು
ಮಹಾಜ್ಞಾನದ ಬತ್ತಿ ಹೊಸೆದು
ಕಾದದ್ದೇ ಬಂತು ಕಣ್ಣೆಗೆಣ್ಣೆ ಹಾಕಿ
ಬರಲಿಲ್ಲ ಅವಳು
ಯಂತ್ರ ಮಂತ್ರ ತಂತ್ರಗಳಲಿ
ಬಂಧಿಸಲು ಸೋತು
ಶರಣಾಗಿ ಸಿದ್ಧ ಸಾಧಕರೇ
ಕಣ್ಣನರೆಮುಚ್ಚಿದಾಗ ಉನ್ಮನಿಯಲಿ
ಥಕ್ಕನೆ ಎದ್ದುಬಂದಳು ತಾಯಿ
ಎಚ್ಚರ ತಪ್ಪಿದಾಗಲೇ ಸೃಷ್ಟಿ



ಕಾಲಿಟ್ಟು
ಭವದ ಸ್ಪ್ರಿಂಗಿನ ಮೇಲೆ
ನಭದ ಅನಂತಕ್ಕೆ ಜಿಗಿವ
ಅವಳ ಒಂದುಕಾಲು
ಕಾಲದಾಚೆ
ಇನ್ನೊಂದು ಈ ಮಣ್ಣಿನೆದೆಯಲ್ಲಿ
ಉಧೋ ಉಧೋ ತಾಯಿ
ನಿನ್ನ ಚಿಗುರು ಪಾದಕ್ಕೆ



ಗೀತಾ ವಸಂತ

ಕಲೆ: ಜಬೀವುಲ್ಲಾ ಎಂ. ಅಸದ್